<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>

ಸಿ.ಸಿ. ನಂ. 2528/2021

ಸಿ.ಡಬ್ಲೂಃ 8 ಪಿ.ಡಬ್ಲೂಃ 5

ಹೆಸರುಃ ಪ್ರಕಾಶ ಅಂಬೋರೆ
ತಂದೆಯ ಹೆಸರುಃ ವೆಂಕಣ್ಣ
ವಯಸ್ಸುಃ 51 ವರ್ಷ
ಉದ್ಯೋಗಃ ಹೋಮ್ ಗಾರ್ಡ
ವಿಳಾಸಃ ಗಜೇಂದ್ರಗಡ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 21-07-2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ</u>**

ಚಾಸಾ-1, 7 ಮತ್ತು 9 ರವರು ನನಗೆ ಗೊತ್ತು. ಸುಮಾರು 5-6 ವರ್ಷಗಳ ಹಿಂದೆ ಚಾಸಾ-7 ರವರು ಬಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಬೆಣಚಮಟ್ಟಿ ಹತ್ತಿರ ಇರುವ ಟ್ರಾಕ್ಟರನ್ನು ತೆಗೆದುಕೊಂಡು ಬರೋಣ ಎಂದು ನನ್ನನ್ನು ಕರೆದುಕೊಂಡು ಹೋದರು. ಬೆಣಚಮಟ್ಟಿಯ ಹತ್ತಿರ ರಸ್ತೆಯಲ್ಲಿ ಟ್ರಾಕ್ಟರ ನಿಂತಿತ್ತು, ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು. ಸ್ಥಳದಲ್ಲಿ ಅರ್ಜುನ ಸರ್ ರವರು ಪಿ.ಎಸ್.ಐ ಸಾಹೇಬರ ಜೊತೆ ಮಾತನಾಡಿದರು. ಖಾಲಿ ಟ್ರಾಕ್ಟರ ರಸ್ತೆಯಲ್ಲಿ ನಿಂತಿತ್ತು. ನಂತರ ನನ್ನನ್ನು ಬೈಕನಲ್ಲಿ ವಾಪಸ ಕರೆದುಕೊಂಡು ಬಂದರು. ಈ ಪ್ರಕರಣದ ಬಗ್ಗೆ ನನಗೆ ಬೇರೆ ಏನು ಗೊತ್ತಿಲ್ಲ. ಪೊಲೀಸರು ನನ್ನನ್ನು ಠಾಣೆಗೆ ಕರೆದು ಹೇಳಿಕೆ ಪಡೆದಿಲ್ಲ.

( ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ,**

ನಾನು ಆಟೋ ಓಡಿಸುತ್ತ ಉಪಜೀವನ ನಡೆಸುತ್ತೇನೆ ಎಂದರೆ ಸರಿ. ನಾನು ಹೋಮ್ ಗಾರ್ಡ ಕೆಲಸ ಸಹ ಮಾಡುತ್ತೇನೆ ಎಂದರೆ ಸರಿ. ದಿಃ 01-03-2021 ರಂದು ಬೆಣಚಮಟ್ಟಿ ಗ್ರಾಮದಿಂದ ನಾಗರಸಿಕೊಪ್ಪ ತಾಂಡಾಕ್ಕೆ ಹೋಗುವ ರಸ್ತೆಯ ಹತ್ತಿರ ಚಾಸಾ-7 ರವರು ನನ್ನನ್ನು ಕರೆದುಕೊಂಡು ಹೋದರು ಎಂದರೆ ಸರಿ. ಸ್ಥಳದಲ್ಲಿ ಚಾಸಾ-1 ಮತ್ತು 6 ರವರು ರಸ್ತೆಯಲ್ಲಿ ಟ್ರಾಕ್ಟರನ್ನು ತಡೆಹಿಡಿದಿದ್ದರು ಎಂದರೆ ಸರಿ. 3 ಜನ ಆರೋಪಿತರು ಏರು ಧ್ವನಿಯಲ್ಲಿ ಚಾಸಾ-1 ಮತ್ತು 6 ರವರಿಗೆ ಮಾತನಾಡಿ ನಮ್ಮ

ಟ್ರಾಕ್ಟರನ್ನು ಏಕೆ ತಡೆಹಿಡಿದಿದ್ದಿರಿ ಎಂದು ಚಾಸಾ-1 ಮತ್ತು 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮನ್ನು ಹೊಡೆದು ನಮ್ಮ ಗಾಡಿಯನ್ನು ತೆಗೆದುಕೊಂಡು ಹೋಗುತ್ತೇವೆ ಎಂದು ಬೇದರಿಕೆ ಹಾಕಿದರು ಎಂದರೆ ಸಾಕ್ಷಿಯು ನಾನು ಆಗ ಸ್ಥಳದಲ್ಲಿ ಇದ್ದಿಲ್ಲ ನಂತರದಲ್ಲಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಆರೋಪಿತನು ಮುಂದೆ ಎನು ಆಗುತ್ತದೆ ನೋಡಿಕೊಳ್ಳುತ್ತೇನೆ ನೀನು ಟ್ರಾಕ್ಟರ ತೆಗೆದುಕೊಂಡು ಹೋಗು ಎಂದು 2 ನೇ ಆರೋಪಿತನಿಗೆ ದುಷ್ಪ್ರೇರಣೆ ಮಾಡಿದ್ದರಿಂದ 2 ನೇ ಆರೋಪಿತನು ಅಲ್ಲಿಂದ ಟ್ರಾಕ್ಟರನ್ನು ಜೊರಾಗಿ ಚಾಲನೆ ಮಾಡಿಕೊಂಡು ಹೋದನು ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು 3 ನೇ ಆರೋಪಿತನನ್ನು ಹುಡುಕಾಡಿದರು ಸಿಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಕರ್ತವ್ಯದ ಮೇಲೆ ಇದ್ದ ಪೊಲೀಸ ಅಧಿಕಾರಿಗಳಿಗೆ ತೊಂದರೆ ಮಾಡಿದ್ದಲ್ಲದೇ ಅವರ ಮೇಲೆ ಹಲ್ಲೆ ಮಾಡಿ, ಕೆಲಸಕ್ಕೆ ಅಡೆ-ತಡೆ ಮಾಡಿ ಟ್ರಾಕ್ಟರ ತೆಗೆದುಕೊಂಡು ಹೋಗುವಂತೆ ದುಷ್ಪ್ರೇರಣೆಯನ್ನು ಮಾಡಿ ಜೀವದ ಬೇದರಿಕೆಯನ್ನು ಆರೋಪಿತರು ಹಾಕಿದ ಕುರಿತು ಈಗ ಓದಿ ಹೇಳಿದಂತೆ ಪೊಲೀಸರಿಗೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪೊಲೀಸರಿಗೆ ದಿಃ 04-03-2021 ರಂದು ಈಗ ಓದಿ ಹೇಳಿದಂತೆ ಯಾವುದೇ ಪುನಃ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ಒಪ್ಪದ ಹೇಳಿಕೆ ಮತ್ತು ಪುನಃ ಹೇಳಿಕೆಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಪಿ-5 ಮತ್ತು 6 ಎಂದು ಗುರುತಿಸಲಾಯಿತು.

2. ಮೇಲಿನಂತೆ ಘಟನೇ ನಡೆದ ಬಗ್ಗೆ ನನಗೆ ಗೂತ್ತಿದ್ದು,ಆ ಕುರಿತು ನಿ.ಪಿ-5 ಮತ್ತು 6 ರಂತೆ ಹೇಳಿಕೆ ಮತ್ತು ಪುನಃ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದ**</u>

ಇರುವುದಿಲ್ಲ ಎಂದು ನುಡಿದಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಅದೆ.

Sd/-

(ಹುಲುಗಪ್ಪ ಡಿ.)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ (ಪೀಠಾಸಿನ ಗಜೇಂದ್ರಗಡ)